ಆ) ಈ ಬಗ್ಗೆ ನಿರ್ದಿಷ್ಟವಾದ ಯಾವ ಸೂಚನೆಯೂ ಇರಲಿಲ್ಲವಾದ್ದರಿಂದ ತೆಗೆದುಕೊಂಡ ನಿಲುವಿನ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಬಗ್ಗೆ ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಕೇಳಿ ಕೇಂದ್ರದಿಂದ ಯಾವ ಮಾಹಿತಿಯೂ ಬಂದಿಲ್ಲವಾದ್ದರಿಂದ ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ವರದಿಗಳನ್ನೊಪ್ಪಿಸುವುದು

ಶ್ರೀ ಲಕ್ಷ್ಮೀನರಸಿಂಹಯ್ಯ (ಉಪಾಧ್ಯಕ್ಷರು).—ಮಾನ್ಯ ಅಧ್ಯಕ್ಷರೇ, ಆರ್ಜಿಗಳ ಸಮಿತಿಯ ಮೂರನೇ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಆರ್ಜಿಗಳ ಸಮಿತಿಯ ಮೂರನೇ ವರದಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಲಕ್ಷ್ಮೀನರಸಿಂಹಯ್ಯ (ಉಪಾಧ್ಯಕ್ಷರು).—ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಒಂದನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

SRI B. NARAYANASWAMY.—I know that the House agrees with the report.

ಅಧ್ಯಕ್ಷರು.—ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಒಂದನೇ ವರದಿಯನ್ನು ಸಭೆಗೆ ಒಪ್ಪಿಸಲಾಯಿತು.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅ) ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ಸಹಕಾರ ಇಲಾಖೆಗಳಿಗೆ ಸಂಬಂಧಿಸಿದಂತೆ, ಒಪ್ಪಿದ ವಿಧಾನ ಸಭೆಯ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಒಪ್ಪಿದ ಹಾಗೂ ೧೫ನೇ ವರದಿಗಳಲ್ಲಿ ಮಾಡಲಾದ ಶಿಫಾರಸ್ಸುಗಳ ಮೇಲೆ ಸರ್ಕಾರದವರು ತೆಗೆದುಕೊಂಡ ಕ್ರಮಗಳ ಮೇಲೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ೧೫ನೇ ವರದಿ.

ಆ) ಪಶುಸಂಗೋಪನೆ ಇಲಾಖೆಗೆ ಸಂಬಂಧಿಸಿದಂತೆ ೧೯೭೮-೭೯ನೇ ಸಾಲಿನಿಂದ ೧೯೮೩-೮೪ನೇ ಸಾಲಿನವರೆಗಿನ ಹಣ ವಿನಿಯೋಗ ಮತ್ತು ವಿತ್ತೀಯ ಲೆಕ್ಕ ಪತ್ರಗಳ ಮೇಲಿನ ಸದರಿ ಸಾಲುಗಳ ಬಗ್ಗೆ ಭಾರತದ ನಿಯಂತ್ರಕ ಮಹಾಲೇಖ ಪರೀಕ್ಷಕರ (ಸಿವಿಲ್) ವರದಿಯ ಮೇಲಿನ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ೧೬ನೇ ವರದಿಯನ್ನು, ಹಾಗೂ

ಇ) ಆಹಾರ ಇಲಾಖೆಗೆ ಸಂಬಂಧಿಸಿದಂತೆ ಒಪ್ಪಿದ ವಿಧಾನ ಸಭೆಯ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ೧೧ನೇ ವರದಿಯಲ್ಲಿ ಮಾಡಲಾಗಿದ್ದ ಶಿಫಾರಸ್ಸುಗಳ ಮೇಲೆ ಸರ್ಕಾರದವರು ತೆಗೆದುಕೊಂಡ ಕ್ರಮಗಳ ಮೇಲೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ೧೭ನೇ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಮೇಲ್ಕಂಡ ವರದಿಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ.

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ಯೆಡ್ಡೂರ್ ತಾಲ್ಲೂಕಿನ, ಗುರುಮಿಟ್‌ಕಲ್ ಮುನಿಸಿಪಾಲಿಟಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಪೋಲೀಸರು ದಸ್ತಗಿರಿ ಮಾಡಿ ಮೆರವಣಿಗೆ ಮಾಡಿಸಿರುವುದರ ಬಗ್ಗೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್).—ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾವು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಗುರುಮಿಠಕಲ್‌ನಲ್ಲಿ ೧೫ನೇ ತಾರೀಖು ಒಂದು

ದೊಡ್ಡ ಅಹಿತಕರವಾದ ಘಟನೆ ನಡೆದಿದೆ. ಅದರಲ್ಲಿ ವಿಶೇಷವಾಗಿ ಮುನಿಸಿಪಲ್ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು ಮತ್ತು ಕೆಲವು ಗೌರವಾನ್ವಿತ ಸದಸ್ಯರನ್ನೂ ಸೇರಿಸಿ, ಕೆಲವು ಪೋಲೀಸ್ ಅಧಿಕಾರಿಗಳು ಅಂದರೆ ಸರ್ಕಲ್ ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರುಗಳು ೧೪ನೇ ತಾರೀಖು ೭ ಘಂಟೆಗೆ, ಗುರುಮಠಕಲ್‌ಗೆ ೪೦ ಕಿಲೋಮೀಟರ್ ದೂರದಲ್ಲಿರತಕ್ಕಂಥ ಯಾದಗೀರ್‌ಗೆ ಕರೆದುಕೊಂಡು ಹೋಗಿ.....

ಶ್ರೀ ಎಂ. ವೀರಪ್ಪ ಮೊಯ್ಲಿ.—ಹೋಂ ಮಿನಿಸ್ಟರು ಸಭೆಯಲ್ಲಿ ಇಲ್ಲ.

ಅಧ್ಯಕ್ಷರು.—ಅವರು ಬರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಬಹಳ ಮಹತ್ವವಾದ ಪ್ರಶ್ನೆ.

ಅಧ್ಯಕ್ಷರು.—ಮಹತ್ವವಾದುದೆಂದೇ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಗೃಹ ಸಚಿವರು ಇಲ್ಲ, ಮುಖ್ಯ ಮಂತ್ರಿಗಳು ಇಲ್ಲ, ಈ ವಿಷಯದ ಬಗ್ಗೆ ಅವರು ಅತ್ಯವಶ್ಯಕವಾಗಿ ಇರಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಗೃಹ ಸಚಿವರು ಮೇಲ್ಮನೆಯಲ್ಲಿ ಇದ್ದಾರೆ. ನಾನು ಅವರು ಬರುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮುಖ್ಯ ಮಂತ್ರಿಗಳಿರುವುದು ಬಹಳ ಅತ್ಯವಶ್ಯ ಇದೆ. ಅವರು ಮಂತ್ರಿ ಮಂಡಲದಲ್ಲಿ ಕೆಲವು ನಿರ್ಣಯಗಳನ್ನು ತೆಗೆದುಕೊಂಡು, ಜಿಲ್ಲಾ ಮಂತ್ರಿಗಳಿಗೆ ಕೆಲವೊಂದು ಆದೇಶಗಳನ್ನು ಕೊಟ್ಟಿದ್ದಾರೆ. ಅವರು ಮತ್ತು ಗೃಹ ಸಚಿವರು ಇದ್ದರೆ ಸರಿಹೋಗುತ್ತದೆ. ೧೪ನೇ ತಾರೀಖು ಸುಮಾರು ೭ ಗಂಟೆಗೆ ಈ ಒಂದು ಅಹಿತಕರವಾದ ಘಟನೆ ನಡೆಯಿತು. ಅದರಲ್ಲಿ ಸುಮಾರು ೧೦ ಜನರಿಗೆ ಯಾದಗೀರ್‌ಗೆ ತೆಗೆದುಕೊಂಡು ಹೋಗಿ, ಸರ್ಕಲ್ ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್ ಮತ್ತು ಗುರುಮಿಠಕಲ್ ಸಬ್ ಇನ್‌ಸ್ಪೆಕ್ಟರ್ ಎಲ್ಲರೂ ಸೇರಿ, ಜೀವ್ನಾಗಿ ಹೊಡೆದು, ಚಿತ್ರಹಿಂಸೆ ಕೊಟ್ಟಿದ್ದಾರೆ. ನಾನು ತಮಗೆ ಹೇಳಬೇಕಾದರೆ ಈ ರೀತಿಯಾದ ಹಿಂಸೆ ಹಿಂದೆ ನೈಜಾಮ್ ಸರ್ಕಾರದಲ್ಲಿ ರಜಾಕ್‌ರು ಕೂಡ ಕೊಡುತ್ತಿರಲಿಲ್ಲ, ಅಷ್ಟು ಹಿಂಸೆ ಮಾಡಿದ್ದಾರೆ.

(ಗೊಂದಲ)

ಬಹುಶಃ ಈ ಫೋಟೋಗಳನ್ನು ತೋರಿಸಿದರೆ ನಮಗೆ ಅರ್ಥವಾಗುತ್ತದೆ. ಇವನ್ನು ತಾವು ಖುದ್ದಾಗಿ ನೋಡಬೇಕು.

(ಭಾವಚಿತ್ರಗಳನ್ನು ಅಧ್ಯಕ್ಷರಿಗೆ ಕಳುಹಿಸಿಕೊಟ್ಟರು)

ಅವರಿಗೆ ಯಾವರೀತಿಯಾಗಿ ಚಿತ್ರಹಿಂಸೆ ಕೊಟ್ಟಿದ್ದಾರೆ, ಯಾವರೀತಿಯಾಗಿ ಅವರ ಬೆನ್ನ ಮೇಲೆ ಹೊಡೆದಿದ್ದಾರೆ ಮತ್ತು ಪ್ರತಿಯೊಬ್ಬ ಸದಸ್ಯರಿಗೂ ಈ ರೀತಿ ಹೊಡೆಯುವಾಗ ನೀವು ಲೈಟ್ನಿಂಗ್ ಕಾಲ್ ಹಚ್ಚಿ ಮಲ್ಲಿಕಾರ್ಜುನ ಖರ್ಗೆಯವರಿಗೆ ಮಾತನಾಡುತ್ತೀರಾ ಎಂದು ಕಾಂಗ್ರೆಸ್ ಪಕ್ಷದವರಿಗೆ ಹೊಡೆದಿದ್ದಾರೆ. ಮತ್ತು ಅಲ್ಲಿದ್ದ ಆರು ಜನ ಜನತಾ ಪಕ್ಷದ ಸದಸ್ಯರಿಗೆ ಹೊಡೆಯುವಾಗ ಅವರಿಗೆ ಸಂಬಂಧಪಟ್ಟ ಲೀಡರ್‌ಗಳ ಹೆಸರುಗಳನ್ನು ತೆಗೆದುಕೊಂಡು ಅವರಿಗೆ ಹೊಡೆದಿದ್ದಾರೆ.

ಶ್ರೀ ಡಿ.ಟಿ. ಜಯಕುಮಾರ್.—ಇದರಲ್ಲಿ ಯಾವುದೇ ರಾಜಕೀಯ ಬೇಡ.

(ಗೊಂದಲ)

ಅಧ್ಯಕ್ಷರು.—ಜನತಾದವರಿಗೂ ಹೊಡೆದರು, ಕಾಂಗ್ರೆಸ್‌ನವರಿಗೂ ಹೊಡೆದರು ಎಂದು ಅವರು ಹೇಳುತ್ತಿದ್ದಾರೆ. ನೀವು ಸುಮ್ಮನೆ ಕುಳಿತುಕೊಳ್ಳಿ.....

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪೋಲೀಸರು ಯಾವರೀತಿಯಾಗಿ ಸದಸ್ಯರುಗಳ ಮೇಲೆ ದೌರ್ಜನ್ಯ ನಡೆಸಿದ್ದಾರೆ ಎಂಬುದನ್ನು ನಾನು ಹೇಳುತ್ತಿದ್ದೇನೆ, ಇರೆಸ್ಪೆಕ್ಟೀವ್ ಆಫ್ ಪಾರ್ಟೀಸ್

ಐ ಆಮ್ ಸ್ಪೀಕಿಂಗ್. ಅಲ್ಲಿನ ನಾನ್ ಅಫಿಷಿಯಲ್ ಪ್ರೆಸಿಡೆಂಟ್, ವೈಸ್ ಪ್ರೆಸಿಡೆಂಟ್, ಕೌನ್ಸಿಲರ್ಸ್ ಹಾಗೂ ಗೌರವಾನ್ವಿತ ನಾಗರೀಕರ ಮಾನ ಮರ್ಯಾದೆಯ ಪ್ರಶ್ನೆ ಇದಾಗಿದೆ. ಇದು ಜನತಾ ಕಾಂಗ್ರೆಸ್ ಪ್ರಶ್ನೆ ಅಲ್ಲ. ಅವರ ಮೇಲೆ ನಾನು ಮಾತನಾಡುತ್ತಿಲ್ಲ. ಆದರೆ ಇವತ್ತು ಯಾರೇ ಆಗಲೀ, ಯಾವುದೇ ಒಂದು ತಪ್ಪು ಮಾಡಿದ್ದಾರೆ ಎಂದರೆ, ಕಾನೂನು ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕ ಶಕ್ತಿ ಅವರಿಗೆ ಇದೆ. ಮತ್ತು ಅದರ ಪ್ರಕಾರ ಚಾರ್ಜ್‌ಶೀಟ್ ಮಾಡತಕ್ಕದ್ದು, ಕೋರ್ಟ್‌ನಲ್ಲಿ ಕೇಸ್ ಹಾಕತಕ್ಕದ್ದು, ಈ ರೀತಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳತಕ್ಕ ಅಧಿಕಾರಗಳು ಅವರಿಗೆ ಇದೆ. ಅವರು ಗೂಂಡಾಗಳಾಗಿದ್ದರೆ, ಗೂಂಡಾ ಆಕ್ಟ್ ಪ್ರಕಾರ ಕ್ರಮ ತೆಗೆದುಕೊಳ್ಳಬಹುದಾಗಿತ್ತು. ಅವರೇನಾದರೂ ಡಕಾಯಿತಿ ಮಾಡಿದ್ದರು ಎಂದರೆ, ಡಕಾಯಿತಿ ಆಕ್ಟ್ ಪ್ರಕಾರ ಅವರಿಗೆ ಏನು ಮಾಡಬಹುದಾಗಿತ್ತೋ ಅದನ್ನು ಮಾಡಬಹುದಾಗಿತ್ತು. ಅವರು ಹಲ್ಲೆ ಮಾಡಿದ್ದಾರೆ ಎಂದರೆ ಯಾವ ರೀತಿ ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬಹುದಾಗಿತ್ತೋ ಅದನ್ನು ತೆಗೆದುಕೊಳ್ಳಬಹುದಾಗಿತ್ತು. ಆದರೆ ಆ ರೀತಿ ಮಾಡದೆ, ಅವರನ್ನು ಹ್ಯುಮಿಲಿಯೇಟ್ ಮಾಡಬೇಕು, ಇನ್‌ಸಲ್ಟ್ ಮಾಡಬೇಕು, ಅವರ ಮಾನ ತೆಗೆಯಬೇಕು, ಅವರ ಮರ್ಯಾದೆ ತೆಗೆಯಬೇಕು, ಮುಂದೆ ಇದೇ ರೀತಿ ಯಾವ ಮುಖಂಡರೂ ಕೂಡಾ ಮುಂದೆ ಬರಬಾರದು, ಪೋಲೀಸ್ ಸ್ಟೇಷನ್‌ನಲ್ಲಿ ಅನ್ಯಾಯ ಆದರೆ ಕೇಳಬಾರದು ಎಂಬ ರೀತಿಯಿಂದ ಇವರು ವರ್ತನೆ ಮಾಡಿದ್ದಾರೆ. ಈ ಪೋಲೀಸರು ಏನು ಮಾಡಿದ್ದಾರೆ ಎಂದರೆ ಈ ಊರಿನ ಪುರಸಭೆಯ ಮಾನ್ಯ ಸಭಾಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಒಬ್ಬರು ಕೌನ್ಸಿಲ್ ಸದಸ್ಯರು ನಾರಾಯಣರೆಡ್ಡಿ ಎಂದು ಈ ಮೂರು ಜನರು ಐ.ಬಿ.ಯಲ್ಲಿ ಮಾತನಾಡಿಕೊಂಡು ಕುಳಿತುಕೊಂಡಿದ್ದಾಗ ಅಲ್ಲಿಗೆ ಬಂದು ಇವರನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿದ್ದಾರೆ. ಪೋಲೀಸ್ ಸ್ಟೇಷನ್ ಒಳಗಡೆ ಇದ್ದಂಥ ಮೂರು ನಾಲ್ಕು ಜನರನ್ನು ಭೇಟಿ ಮಾಡುವುದಕ್ಕೆ ಕೆಲವರು ಹೋದಾಗ, ಈ ಸಬ್ ಇನ್‌ಸ್ಪೆಕ್ಟರ್‌ರವರು ಇನ್ನು ಯಾರು ಯಾರು ಎಲ್ಲಿಲ್ಲಿದ್ದಾರೆ ಎಂಬುದನ್ನು ಕೇಳಿಕೊಂಡು ಸರ್ಕಲ್ ಇನ್‌ಸ್ಪೆಕ್ಟರ್‌ರವರು ಹಾಗೂ ಸಬ್‌ಇನ್‌ಸ್ಪೆಕ್ಟರ್‌ರವರು ಖಿದ್ದಾಗಿ ಹೋಗಿ, ಅವರನ್ನು ಇನ್‌ಸ್ಪೆಕ್ಷನ್ ಬಂಗಲೋನಿಂದ ಕರೆದುಕೊಂಡು ಬಂದಿದ್ದಾರೆ. ಗುರುಮಿಟ್ಕಲ್ ಸಬ್‌ಇನ್‌ಸ್ಪೆಕ್ಟರ್‌ರವರು ಹಾಗೂ ಯಾದಗಿರಿಯ ಸರ್ಕಲ್ ಇನ್‌ಸ್ಪೆಕ್ಟರ್ ಹಿರೇಮಠ್ ಎಂಬುವವರು ಈ ರೀತಿ ಮಾಡಿದ್ದಾರೆ. ಇವರಿಬ್ಬರೂ ಬಂದು ಅವರನ್ನು ಕರೆದುಕೊಂಡು ಹೋಗಿ, ಅವರ ಬಟ್ಟೆಯನ್ನು ಬಿಚ್ಚಿಸಿ, ನೆಲದ ಮೇಲೆ ಕೂಡಿ ಎಂದು ಹೇಳಿ, ಪ್ರೆಸಿಡೆಂಟ್, ವೈಸ್‌ಪ್ರೆಸಿಡೆಂಟ್ ಮತ್ತು ಮುನಿಸಿಪಲ್ ಕೌನ್ಸಿಲರ್ ಗಳನ್ನು ನೆಲದಮೇಲೆ ಕೂರಿಸಿದ್ದಾರೆ. ನೆಲದಮೇಲೆ ಕೂರಿಸಿಕೊಂಡು ಉಳಿದಂಥ ಜನ ಎಲ್ಲಿದ್ದಾರೆ ಹೇಳಿ ಎಂದು ಅವರಿಗೆ ಹಿಂಸೆ ಮಾಡಿದ್ದಾರೆ. ಅನಕ್ಕೆ ಇವರುಗಳು ಬೇರೆ ಜನ ಎಲ್ಲಿದ್ದಾರೆ ಎಂಬುದು ಗೊತ್ತಿಲ್ಲ. ಯಾವ ಸಂಬಂಧದಲ್ಲಿ ಏತಕ್ಕಾಗಿ, ಯಾವ ಕೇಸ್‌ನಲ್ಲಿ ನಮ್ಮನ್ನು ಕರೆದುಕೊಂಡು ಬಂದಿದ್ದೀರಿ ಎಂದು ಇವರು ಕೇಳಿದ್ದಕ್ಕೆ, ಅದನ್ನೆಲ್ಲಾ ಪೋಲೀಸ್ ಸ್ಟೇಷನ್‌ನಲ್ಲಿ ಚೆನ್ನಾಗಿ ಹೇಳುತ್ತೆ, ಏ ನಡೆಯಿರಿ ಎಂದು ಹೇಳಿ. ವ್ಯಾನ್‌ನಲ್ಲಿ ಹಾಕಿಕೊಂಡು ಅವರನ್ನು ಕರೆದುಕೊಂಡು ಹೋಗಿದ್ದಾರೆ. ಉಳಿದಂಥ ೬-೭ ಜನರಿಗೆ, ಅವರು ಮನೆಯಲ್ಲಿ ಮಲಗಿದ್ದಾಗ ಅವರನ್ನು ಎಬ್ಬಿಸಿ, ಎಚ್ಚರಿಸಿ, ಪೋಲೀಸ್ ಸ್ಟೇಷನ್‌ಗೆ ಬರಬೇಕು, ಕೆಲಸ ಇದೆ ಎಂದು ಹೇಳಿ ಕರೆದುಕೊಂಡು ಹೋಗಿದ್ದಾರೆ. ಎಲ್ಲಾ ಹತ್ತು ಜನರನ್ನೂ ಯಾದಗಿರಿಗೆ ಕರೆದುಕೊಂಡು ಹೋಗಿ, ಯಾದಗಿರಿಯಲ್ಲಿ ಸಂಪೂರ್ಣವಾಗಿ ನುಪಾರು ಹತ್ತು ಹನ್ನೆರಡು ತಾಸು ಕಂಟಿನ್ಯೂಯಸ್ ಆಗಿ ಹೊಡೆದು, ಬೆತ್ತಲೆ ಮಾಡಿಬ್ಬಾರೆ. ಈಗಾಗಲೇ ಅದರ ಫೋಟೋಗಳನ್ನು ತಮಗೆ ಕೊಟ್ಟಿದ್ದೇನೆ. ಬೆತ್ತಲೆ ಮಾಡಿ ಬೆನ್ನಮೇಲೆ ಹಾಗೂ ತುಂಬಾ ನಾಜೂಕಾದ ಸ್ಥಳಗಳ ಮೇಲೆ ಹೊಡೆದು ಅವರು ನಡೆಯಲಾರದ ಪರಿಸ್ಥಿತಿ ಮಾಡಿದ್ದಾರೆ. ಇಷ್ಟಕ್ಕೆ ಅವರು ನಿಲ್ಲಿಸಲಿಲ್ಲ, ಒಬ್ಬ ಸಬ್‌ಇನ್‌ಸ್ಪೆಕ್ಟರ್ ಆದಮೇಲೆ ಇನ್ನೊಬ್ಬ ಸಬ್‌ಇನ್‌ಸ್ಪೆಕ್ಟರ್ ಹೊಡೆಯುವುದು, ಆದಾದನಂತರ ಸರ್ಕಲ್ ಇನ್‌ಸ್ಪೆಕ್ಟರ್ ಹೊಡೆಯುವುದು, ಕೊನೆಗೆ ಇವರ ಕೈನಿಂದ ಆಗುವುದಿಲ್ಲ ಎಂದಾಗ, ಅಲ್ಲಿದ್ದ ರಿಸರ್ವ್ ಪೋಲೀಸ್ ವ್ಯಾನ್ ಏನಿತ್ತು ಆ ವ್ಯಾನ್‌ನಲ್ಲಿದ್ದ ಕಾನ್‌ಸ್ಟೇಬಲ್‌ಗಳನ್ನು ಕರೆಸಿ, ಅವರಿಂದ ಹೊಡೆಸಿ, ಬೆನ್ನೆಲುಬು ಮುರಿಸಿ, ಕೊನೆಗೆ ಆ ಹತ್ತು ಜನರು ಮಲಗಿಕೊಳ್ಳಲಿಕ್ಕೆ ಬರಲಾರದ ಪರಿಸ್ಥಿತಿಗೆ ಬಂದು ಅವರು ಬಿದ್ದುಬಿದ್ದು ಅಳುವ ಸ್ಥಿತಿಗೆ ತಂದಿದ್ದಾರೆ.

ಅವರನ್ನು ಬಿಡುಗಡೆ ಮಾಡಿಸಬೇಕೆಂದು ಅಡ್ವೊಕೇಟ್ಸ್‌ಗಳಾದ ಶ್ರೀಪಾನ್ ಶರಣಪ್ಪ ಕಲ್ಬುರ್ಗಿ ಯವರು ಮತ್ತು ಶ್ರೀ ಮಲ್ಲಣ್ಣನವರು ಪೋಲೀಸ್ ಠಾಣೆಗೆ ಹೋದರೆ ಅಲ್ಲಿನ ಸಭ್ ಇನ್ಸ್‌ಪೆಕ್ಟರ್ಸ್, ಅವರ ಲೀಡರ್‌ಗಳೆಂದು ತಾವ್ಯಾರು ಇಲ್ಲಿಗೆ ಬರಬೇಡಿ. ನೀವು ಅವರನ್ನು ಭೇಟಿ ಆಗಬೇಕೆಂದಿದ್ದರೆ ಒಂದು ಚೀಟಿಯನ್ನು ಕೊಟ್ಟರೆ ಆ ಚೀಟಿಯನ್ನು ನಾವು ನಮ್ಮ ಡಿ.ವೈ.ಎಸ್.ಪಿ. ಯವರಿಗೆ ತೋರಿಸಿ

ಅವರಿಂದ ಪರ್ಮಿಷನ್ ತೆಗೆದುಕೊಂಡು ಬಂದ ನಂತರ ಬೇಕಾದರೆ ತಾವು ಅವರನ್ನು ಭೇಟಿ ಮಾಡ ಬಹುದೆಂದು ಹೇಳಿದ್ದಾರೆ. ಆ ಕ್ಷಣದಲ್ಲಿ ಆ ಅಡ್ವೊಕೇಟ್ಸ್ ಅನ್ನು ಅಲ್ಲಿಂದ ವಾಪಸ್ಸು ಕಳುಹಿಸಿ ಬಿಟ್ಟಿದ್ದಾರೆ. ಅವರು ವಾಪಸ್ ಬಂದ ಮೇಲೆ ಪುನಹ ಅವರ ಮೇಲೆ ಪೋಲೀಸಿನವರು ದೌರ್ಜನ್ಯ ನಡೆಸಿದ್ದಾರೆ. ಅವರನ್ನು ಕಟ್ಟಿಗೆಯಿಂದ ಹೊಡೆದಿದ್ದಾರೆ, ಮತ್ತು ಲೆದರ್ ಬೆಲ್ಟಿನಿಂದ ಸಹ ಚೆನ್ನಾಗಿ ಥಳಿಸಿದ್ದಾರೆ. ಅವರು ಗೊಳೋ ಎಂದು ಕೂಗಿಕೊಂಡರೂ ಸಹ ಹೊಡೆಯುವುದನ್ನು ಬಿಟ್ಟಿಲ್ಲ. ಈ ರೀತಿ ಅವರನ್ನು ನಾನಾ ರೀತಿಯಲ್ಲಿ ಚಿತ್ರ ಹಿಂಸೆ ಮಾಡಿದ್ದಾರೆ. ಕೊನೆಗೆ ಮರುದಿವಸ ಅಂದರೆ ೧೫ನೇ ತಾರೀಖಿನ ಯಾದಗಿರಿಯಿಂದ ಗುರುಮಠಕಲ್ಲಿಗೆ ಕರೆದುಕೊಂಡು ಬಂದಿದ್ದಾರೆ. ಆಲ್ಲಿ ಪೋಲೀಸಿನವರ ವಿರುದ್ಧವಾಗಿ ಯಾರೂ ಮಾತನಾಡುವಂತಹ ಧೈರ್ಯ ಮಾಡಲಿಲ್ಲ. ಕಾರಣ ವೇನೆಂದರೆ ಮುನಿಸಿಪಲ್ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ ಮತ್ತು ಕೌನ್ಸಿಲರ್ಸ್‌ಗೆ ಈ ರೀತಿ ಚಿತ್ರಹಿಂಸೆ ಕೊಡುವ ಪೋಲೀಸಿನವರು ಇನ್ನು ನಮ್ಮನ್ನು ಸುಮ್ಮನೆ ಬಿಟ್ಟಾರೆಯೇ ಎಂದು ಹೆದರಿಕೊಂಡಿದ್ದಾರೆ. ಕೊನೆಗೆ ಗುರುಮಠಕಲ್ಲಿನಲ್ಲಿ ತಮಟೆ ಭಾರಿಸುವವರನ್ನು ಕರೆಯಿಸಿ ಇವರನ್ನೆಲ್ಲ ಮೆರವಣಿಗೆಯಲ್ಲಿ ಕರೆದುಕೊಂಡು ಹೋಗಿದ್ದಾರೆ. ತಮಟೆ ಬಾರಿಸುವವರು ನಾವು ಏತಕ್ಕೆ ಬರಬೇಕೆಂದು ಕೇಳಿದರೆ ಅವರನ್ನು ಸಹ ಪೋಲೀಸಿನವರು ಹೆದರಿಸಿದ್ದಾರೆ. ಕೊನೆಗೆ ತಮಟೆ ಭಾರಿಸುವವರು ಹೆದರಿಕೊಂಡು ಮೆರವಣಿಗೆಯಲ್ಲಿ ತಮಟೆಯನ್ನು ಭಾರಿಸಿದ್ದಾರೆ. ಮೆರವಣಿಗೆ ಬರುವಾಗ ಸ್ವಲ್ಪ ಸಾವಕಾಶವಾಗಿ ತಮಟೆಯನ್ನು ಭಾರಿಸಿದರೆ ಪೋಲೀಸಿನವರು ಮತ್ತೆ ಅವರನ್ನು ಹೆದರಿಸಿ ಜೋರಾಗಿ ತಮಟೆ ಭಾರಿಸು ವಂತೆ ಹೇಳಿದ್ದಾರೆ. ಒಂದು ವೇಳೆ ನೀವು ನಾವು ಹೇಳಿದಂತೆ ಕೇಳಿಲ್ಲವೆಂದರೆ ನಿಮಗೂ ಸಹ ಇದೇ ರೀತಿ ಚಿತ್ರಹಿಂಸೆ ಮಾಡುತ್ತೇವೆಂದು ಪೋಲೀಸಿನವರು ತಮಟೆ ಭಾರಿಸುವವರನ್ನು ಹೆದರಿಸಿದ್ದಾರೆ. ಮೆರವಣಿಗೆಯನ್ನು ಮುನಿಸಿಪಲ್ ಅಧ್ಯಕ್ಷರಾದ ಶ್ರೀಮಾನ್ ರಮೇಶ್‌ಕಾನಡೆಯವರ ಮನೆಯ ಮುಂದೆ ತೆಗೆದುಕೊಂಡು ಹೋಗಿ ಆಲ್ಲಿ ಸುಮಾರು ೫ ನಿಮಿಷಗಳ ಕಾಲ ಮೆರವಣಿಗೆಯನ್ನು ನಿಲ್ಲಿಸಿ ಕೊಂಡು ತಮಟೆಯನ್ನು ಜೋರಾಗಿ ಹೊಡೆಯುವಂತೆ ಪೋಲೀಸಿನವರು ಹೇಳಿದ್ದಾರೆ. ಅವರ ಮನೆಯಲ್ಲಿ ಅಧ್ಯಕ್ಷರ ಹೆಂಡತಿ ಮತ್ತು ಮಕ್ಕಳು ಅವಮಾನ ತಾಳಲಾರದೆ ಜೋರಾಗಿ ಅತ್ತಿದ್ದಾರೆ. ಅಲ್ಲಿಂದ ಮುನಿಸಿಪಲ್ ಉಪಾಧ್ಯಕ್ಷರ ಮನೆಯಮುಂದೆ ಮೆರವಣಿಗೆಯನ್ನು ತೆಗೆದುಕೊಂಡು ಹೋಗಿ ಅಲ್ಲಿಯೂ ಸಹ ೫ ನಿಮಿಷಗಳ ಕಾಲ ಮೆರವಣಿಗೆಯನ್ನು ನಿಲ್ಲಿಸಿ ತಮಟೆಯನ್ನು ಜೋರಾಗಿ ಭಾರಿಸಿ ದ್ದಾರೆ. ಮೆರವಣಿಗೆಯಲ್ಲಿ ಮುನಿಸಿಪಲ್ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಹಾಗೂ ಇತರರ ಬೀಯನ್ ಮತ್ತು ಅಂಡರ್‌ವೇರ್‌ಗಳನ್ನು ಕಳಚಿ ಕರೆದುಕೊಂಡು ಹೋಗಿದ್ದಾರೆ. ಈ ಅವಮಾನವನ್ನು ಸಹಿಸ ಲಾರದೆ ಕೆಲವುಜನ ಮನೆಗಳಿಗೆ ಹೋಗಿ ಸೇರಿಕೊಂಡಿದ್ದಾರೆ. ಪೋಲೀಸಿನವರು ಅವರಿಗೆ ಕೊಡಬಾರದ ಚಿತ್ರಹಿಂಸೆಯನ್ನು ಕೊಟ್ಟಿದ್ದಾರೆ. ಕೊನೆಗೆ ಮೆರವಣಿಗೆಯನ್ನು ಬಸ್‌ಸ್ಟಾಂಡ್‌ಗೆ ಕರೆದುಕೊಂಡು ಬಂದು ಆಲ್ಲಿ ಸಹ ಮೆರವಣಿಗೆಯನ್ನು ಮಾಡಿಸಿ ಪುನಃ ಪ್ಯಾನ್‌ನಲ್ಲಿ ಯಾದಗಿರಿಗೆ ಕರೆದುಕೊಂಡು ಬಂದಿದ್ದಾರೆ. ಕಾನೂನಿನ ಪ್ರಕಾರ ಹೇಳುವುದಾದರೆ ದಸ್ತಗಿರಿಯಾದ ೨೪ ಗಂಟೆಗಳಲ್ಲಿ ಅವರನ್ನು ಬಿಡಬೇಕಾಗಿತ್ತು. ಆದರೆ ಅವರನ್ನು ಬಿಡಲಿಲ್ಲ.....

ಶ್ರೀ ಕೆ.ಹೆಚ್. ಶ್ರೀನಿವಾಸ.—ಕಾನೂನಿನ ಪ್ರಕಾರ ಬಿಡಿದಿದ್ದರೆ ?

ಶ್ರೀ ಮಲ್ಲಿಕಾರ್ಜುನೆ ಎಂ. ಖರ್ಗೆ.—ಇವರ ಮೇಲೆ ನಾನ್ ಬೆಯಿಲೆಬಲ್ ಅಫೆನ್ಸ್ ಚಾರ್ಜ್ ಮಾಡಿ ಬಿಡುಗಡೆ ಮಾಡಲಿಲ್ಲ. ಕೊನೆಗೆ ಕೆಲವು ಜನ ಅಡ್ವೊಕೇಟ್ಸ್ ಮ್ಯಾಜಿಸ್ಟ್ರೇಟರ ಬಳಿ ಹೋಗಿ ಮನವಿಯನ್ನು ಸಲ್ಲಿಸಿದಾಗ ರಾತ್ರಿ ೧೦-೦೦ ಗಂಟೆಯ ಸಮಯದಲ್ಲಿ ಮ್ಯಾಜಿಸ್ಟ್ರೇಟರು ಇವರನ್ನು ಬಿಡುಗಡೆ ಮಾಡಬೇಕೆಂದು ಆಜ್ಞೆ ಮಾಡಿದರು. ಅವರ ಆಜ್ಞೆಯಲ್ಲಿ ಇವರು ಅಂತಹ ದೊಡ್ಡ ತಪ್ಪೇನೂ ಮಾಡಿಲ್ಲ. ಎರಡು ಸಾವಿರ ರೂಪಾಯಿಗಳ ಸೆಲ್ಫ್ ಬಾಂಡ್ ಮೇಲೆ ಬಿಡಬಹುದೆಂದು ಆರ್ಡರ್ ಮಾಡಿದರು. ಆದರೂ ಸಹ ಪೋಲೀಸಿನವರು ಬಿಡಲಿಲ್ಲ. ಇವರನ್ನು ಬಿಟ್ಟರೆ ಪುನಃ ಗಲಾಟೆಯಾಗುತ್ತದೆ. ಯಾದಗಿರಿ ಜನರು ರೊಚ್ಚಿಗೆದ್ದಿದ್ದಾರೆ. ಮತ್ತು ಯಾದಗಿರಿ ಬಂದ್‌ಗೆ ಸಹ ಕರೆ ಕೊಟ್ಟಿದ್ದಾರೆ. ಆದ್ದರಿಂದ ಬಿಡುವುದಕ್ಕೆ ಆಗುವುದಿಲ್ಲವೆಂದು ಹೇಳಿದರು. ತದನಂತರ ಮ್ಯಾಜಿಸ್ಟ್ರೇಟರ ಆರ್ಡರ್ ಅನ್ನು ಉಲ್ಲಂಘನೆ ಮಾಡಬಾರದೆಂದು ಹೇಳಿ ಸಧ್ಯಕ್ಕೆ ಬಿಟ್ಟುಂತೆ ಮಾಡಿ ಪುನಃ ಅವರನ್ನು ಬಂಧಿಸಿದರು. ಅವರನ್ನು ಬಂಧಿಸಿದ ೧೨ ಗಂಟೆಗಳ ಕಾಲ ಅವರನ್ನು ಯಾರ ಕಣ್ಣಿಗೂ ಕಾಣಿಸುವಂತೆ ಇಟ್ಟಿರಲಿಲ್ಲ. ಪೋಲೀಸಿನವರು ಅವರಿಗೆ ಚಿತ್ರಹಿಂಸೆಯನ್ನು ಕೊಟ್ಟಿದ್ದಾರೆ. ಕೊನೆಗೆ ನಾವೆಲ್ಲ ಎಸ್.ಪಿ.ಯವರಿಗೆ ಮನವಿಯನ್ನು ಕೊಟ್ಟಮೇಲೆ ಯಾದಗಿರಿ ಬಂದ್‌ಗೆ ಕಾಲ್ ಮಾಡಿದ್ದೀರಿ, ಆ ಬಂದ್ ಅನ್ನು ವಾಪಸ್ ತೆಗೆದುಕೊಂಡರೆ ಬಿಡುಗಡೆ ಮಾಡುತ್ತೇವೆಂದು ಎಸ್.ಪಿ. ಯವರು ಹೇಳಿದರು. ಅವರೆಲ್ಲರನ್ನು ಸೆಕ್ಷನ್ ೧೫೧ರ ಪ್ರಕಾರ ರೀ ಅರೆಸ್ಟ್ ಮಾಡಿದ್ದೇವೆ ಆ ರೀತಿಯಾಗಿ ಆಲ್ಲಿನ ಡಿ.ವೈ ಎಸ್.ಪಿ. ಮತ್ತು ಸರ್ಕಲ್ ಇನ್‌ಸ್ಪೆಕ್ಟರ್ ಹೇಳುತ್ತಾರೆ. ಅಂದರೆ, ಇದರ ಅರ್ಥ ಏನು

ಮ್ಯಾಜಿಸ್ಟ್ರೇಟ್‌ರವರು ಅವರನ್ನು ಬಿಡಬೇಕೆಂದು ಆರ್ಡರ್ ಮಾಡಿದರೂ ಕೂಡ ಅವರನ್ನು ಬಿಟ್ಟಿಲ್ಲ. ಅವರನ್ನು ಬಿಟ್ಟರೆ ಪುನಃ ಅವರು ಹೋಗಿ ಗಲಾಟೆ ಮಾಡುತ್ತಾರೆಂದು ಅವರೇ ಊಹಿಸಿಕೊಂಡು ಮತ್ತೆ ೧೫ ಜನರನ್ನು ರೀ-ಅರೆಸ್ಟ್ ಮಾಡಿದ್ದೀವೆಂದು ಹೇಳಿ ಪುನಃ ಒಳಗೆ ಅವರನ್ನು ಇಡುವುದು ಯಾವ ನ್ಯಾಯ ? ಯಾವ ಕಾನೂನಿನ ಪ್ರಕಾರ ಈ ಸರ್ಕಾರ ಮಾಡಿದೆ ಎಂದು ಕೇಳುತ್ತೇನೆ. ನಾವು ಬಡವರಿಗೆ ರಕ್ಷಣೆ ಕೊಡುತ್ತೇವೆಂದು ಹೇಳುತ್ತೀರಿ, ವೀಕರ್ ಸೆಕ್ಷನ್ ಜನಕ್ಕೆ ರಕ್ಷಣೆ ಕೊಡುತ್ತೇವೆಂದು ಹೇಳುತ್ತೀರಿ, ಮೈನಾರಿಟೀಸ್ ಜನರಿಗೆ ರಕ್ಷಣೆ ಕೊಡುತ್ತೇವೆಂದು ಹೇಳುತ್ತೀರಿ ಆದರೆ ಗುಲ್ಬರ್ಗ ಜಿಲ್ಲೆಯ ಗುರುಮಿಟ್ಕಲ್ ತಾಲ್ಲೂಕಿನ ಫಸ್ಟ್ ಸಿಟಿಜನ್ ಆಂದರೆ ಮೊದಲನೇ ನಾಗರೀಕನಿಗೆ ಇವತ್ತಿನ ದಿವಸ ರಕ್ಷಣೆ ಕೊಡತಕ್ಕಂಥ ಯೋಗ್ಯತೆ ತಮ್ಮ ಸರ್ಕಾರಕ್ಕೆ ಬರಲಿಲ್ಲ. ಈ ರೀತಿ ದೌರ್ಜನ್ಯ

(ಗೊಂದಲ)

ಅಲ್ಲಿ ನಡೆದಿರುವುದರಿಂದ ನಾನು ಅಲ್ಲಿ ತಲೆ ಬಾಗಿಸತಕ್ಕಂಥ ಪರಿಸ್ಥಿತಿ ಬಂದಿದೆ. ನಮ್ಮ ಮರ್ಯಾದೆ ಹೋಗಿದೆ ಎಂದು ಅಲ್ಲಿನ ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು ಬಂದು ಹೇಳುತ್ತಿದ್ದಾರೆ. ನೀವು ಈ ಭಾಗದ ಶಾಸಕರಾಗಿದ್ದೀರಿ, ಇಂಥ ದೌರ್ಜನ್ಯ ಹಿಂದೆ ಇದ್ದಂಥ ರಜಾಕರ ಕಾಲದಲ್ಲೂ ಆಗಿಲ್ಲ, ನಿಜಾಮರ ಕಾಲದಲ್ಲೂ ಆಗಿಲ್ಲ ಆದರೆ ನಿಮ್ಮ ಕಾಲದಲ್ಲಿ ಆಗಿದೆಯೆಂದು ಹೇಳುತ್ತಿದ್ದಾರೆ. ಇವತ್ತು ನೀವು ಮಾಡಿದಂಥ ಅನ್ಯಾಯ, ಈ ಅಧಿಕಾರಿಗಳು, ಈ ಸರ್ಕಾರ ಮಾಡಿದಂಥ ಅನ್ಯಾಯದಿಂದ ನಮ್ಮಂಥ ನಾನ್ ಅಫಿಸಿಯಲ್ಸ್ ತಲೆ ಬಾಗಬೇಕಾಗಿದೆ. ಈ ರೀತಿ ಪರ್ತನೆ ಮಾಡಿದ್ದರೂ, ಕೊನೆಗೆ ಅವರನ್ನು ಬಿಡುಗಡೆ ಮಾಡುವುದಕ್ಕೆ ಹಿಂಜರಿದರು. ಆಮೇಲೆ ಒಂದು ಚರ್ಚೆ ನಡೆಯಿತು. ಚರ್ಚೆಯ ನಂತರ ೧೬ನೇ ತಾರೀಖು ಮಧ್ಯಾಹ್ನ ೧೨ ಗಂಟೆಗೆ ಅವರನ್ನು ಬಿಡುಗಡೆ ಮಾಡಿದರು. ತದನಂತರ ಮ್ಯಾಜಿಸ್ಟ್ರೇಟ್‌ರವರ ಹತ್ತಿರ ಹೋಗಿ ಬಾಂಡ್ ಕೊಟ್ಟು ಬಂದರು. ಬಾಂಡ್ ಕೊಡುವಾಗ ಪೋಲೀಸರ ಹೆದರಿಕೆಯಿಂದ ಅವರು ಮ್ಯಾಜಿಸ್ಟ್ರೇಟ್‌ರವರ ಮುಂದೆ ಇವರು ನಮಗೆ ಹೊಡೆದಿದ್ದಾರೆ ಎಂದು ಹೇಳಲಿಕ್ಕೆ ಧೈರ್ಯವಾಗಲಿಲ್ಲ. ಏಕೆ ಧೈರ್ಯ ವಾಗಲಿಲ್ಲವೆಂದರೆ, ಮುಂಚೇನೇ, ಪೋಲೀಸಿನವರು ಹೊಡೆದಿದ್ದಾರೆಂದು ಮ್ಯಾಜಿಸ್ಟ್ರೇಟ್‌ರವರ ಮುಂದೆ ಹೇಳಿದರೆ ಪುನಃ ನಿಮ್ಮ ಹೆಂಡರು ಮಕ್ಕಳನ್ನು ಬಿಡುವುದಿಲ್ಲವೆಂದು ಹೆದರಿಸಿ ಹೇಳಿದ್ದಾರೆ. ಅವರು ಆ ರೀತಿ ಹೇಳಿದ ಮೇಲೆ ಇವರು ಹೆದರಿಕೊಂಡು ನಾವೇನಾದರೂ ಹೇಳಿದರೆ ಪುನಃ ಹೊಡೆಯುತ್ತಾರೆಂದು ಹೆದರಿಕೊಂಡು ನಮಗೆ ಏನೂ ಆಗಿಲ್ಲವೆಂದು ಹೇಳಿದ್ದಾರೆ. ಈಗ ಪೋಲೀಸಿನವರು ಆದನ್ನೇ ದೊಡ್ಡದು ಮಾಡಿಕೊಂಡು ನಾವು ಅವರಿಗೆ ಹೊಡೆದೇ ಇಲ್ಲ. ಹೊಡೆದಿದ್ದರೆ ಅವರು ಮ್ಯಾಜಿಸ್ಟ್ರೇಟ್‌ರವರ ಮುಂದೆ ಹೇಳಬೇಕಾಗಿತ್ತೆಂದು ಹೇಳುತ್ತಿದ್ದಾರೆ. ಇವರುಗಳಿಗೆ ಏಟು ಬಿದ್ದ ಮೇಲೆ ಹಾಸ್ಪಿಟಲ್‌ಗೆ ಕಳುಹಿಸಲಾಗಿದೆ. ಆಸ್ಪತ್ರೆಯ ವೈದ್ಯರಾದ ಶ್ರೀ ''ಸವದಿ'' ಯವರು ಅವರಿಗೆ ಉಪಚಾರ ಮಾಡಿದ್ದಾರೆ. ಈಗ ಡಿ.ಐ.ಜಿ.ಯವರು ಸ್ವತಃ ಇನ್ಸ್‌ಪೆಕ್ಷನ್ ಮಾಡಿ ಎಲ್ಲೆಲ್ಲಿ ಹೊಡೆದಿದ್ದಾರೆ, ಯಾವ ರೀತಿ ಹೊಡೆದಿದ್ದಾರೆ ಎಂಬುದನ್ನು ನೋಡಿದ್ದಾರೆ. ತದನಂತರ ಸಂಬಂಧಪಟ್ಟ ಉಸ್ತುವಾರಿ ಸಚಿವರಾದ ಶ್ರೀ ಬಸವಣ್ಣಪ್ಪನವರು ಬಂದಿದ್ದರು. ಅವರೂ ಸಹ ನೋಡಿಕೊಂಡು ಬಂದಿದ್ದಾರೆ. ಯಾವರೀತಿ ಅವರುಗಳಿಗೆ ಅವಮಾನ ಮಾಡಿದ್ದಾರೆ ಎನ್ನತಕ್ಕ ಬಗ್ಗೆ ಸ್ವತಃ ಕೇಳಿಕೊಂಡು ಬಂದಿದ್ದಾರೆ. ಆದರೂ ಕೂಡ ನನಗೆ ಆಶ್ಚರ್ಯವಾಗುವುದೇನೆಂದರೆ, ಇಷ್ಟೆಲ್ಲಾ ಆದನಂತರವೂ ಏನೂ ಕ್ರಮ ಇವರು ತೆಗೆದುಕೊಂಡಿಲ್ಲ. ಈ ವಿಷಯ ನನಗೆ ಗೊತ್ತಾದ ತಕ್ಷಣ ನಾನು ಗುಲ್ಬರ್ಗಾದಿಂದ ಮುಖ್ಯಮಂತ್ರಿಯವರನ್ನು ಕಾಣಲು ಬಂದೆ. ನಾನು ಬಂದಾಗ ಮುಖ್ಯಮಂತ್ರಿಯವರು ಬಹಳ ಬಿಜ್ನೀಯಾಗಿದ್ದರು. ಆದರೂ ಕೂಡ ಹೇಗೋ ಸಮಯ ತೆಗೆದುಕೊಂಡು ನಾನು ಅವರನ್ನು ಬೆಟ್ಟಿ ಆದೆ. ಸ್ವಾಮಿ, ಗುರುಮಿಟ್ಕಲ್‌ನಲ್ಲಿ ಹಿಂದೆ ಎಂದೂ ನಡೆಯದೇ ಇದ್ದುದು, ಮತ್ತು ಇಡೀ ರಾಜ್ಯದಲ್ಲೇ ನಡೆದುದೆ ಇದ್ದಂಥ ಒಂದು ಇನ್ಸಿಡೆನ್ಸ್ ಇಲ್ಲಿ ನಡೆದಿದೆಯೆಂಬ ಮಾತನ್ನು ನಾನು ಹೇಳುತ್ತೇನೆ. ಈ ರೀತಿ ಚಿತ್ರಹಿಂಸೆಯನ್ನು ಕೊಟ್ಟಿದ್ದನ್ನು ನಾನಂತೂ ನೋಡಿಲ್ಲ. ಕನಿಷ್ಟಪಕ್ಷ ನಾನು ರಾಜಕೀಯದಲ್ಲಿ ೧೨ ವರ್ಷದಿಂದ ಇದ್ದೇನೆ. ಆ ಅವಧಿಯಲ್ಲೂ ಸಹ ನಾನು ಇಂಥದ್ದನ್ನು ನೋಡಿಲ್ಲ. ಮುಖ್ಯ ಮಂತ್ರಿಗಳು ಬಹುಶಃ ೧೯೫೬ ರಿಂದ ಇಲ್ಲಿಯವರೆಗೆ ಆವರಿಗೆ ಅನುಭವ ಇದೆ. ಅವರು ಏನಾದರೂ ಹಿಂದೆ ನೋಡಿದ್ದಾರೋ ಏನೋ ಗೊತ್ತಿಲ್ಲ. ಈ ರೀತಿಯಾಗಿ ಅವಮಾನವನ್ನು ಮಾಡಿದ್ದಾರೆ. ಇದೆಲ್ಲವನ್ನೂ ಕೂಡ ಮಾನ್ಯ ಮಂತ್ರಿಗಳವರು ನೋಡಿದ್ದಾರೆ, ಡಿ.ಐ.ಜಿ.ಯವರು ನೋಡಿದ್ದಾರೆ, ಎಸ್.ಪಿ.ಯವರು ನೋಡಿದ್ದಾರೆ, ಗುರುಮಿಟ್ಕಲ್ ಹಾಗೂ ಯಾದಗಿರ್‌ನಲ್ಲಿರತಕ್ಕಂಥ ಜನರೆಲ್ಲರೂ, ಅಂದರೆ ಲಕ್ಷಾಂತರ ಜನರು ಈ ಪರಿಸ್ಥಿತಿಯನ್ನು ನೋಡಿದ್ದಾರೆ. ಆದರೂ ಕೂಡ ಈ ಪೋಲೀಸರ ಮೇಲೆ, ಅಧಿಕಾರಿಗಳ ಮೇಲೆ ತತ್‌ಕ್ಷಣ ಸಸ್ಪೆಂಡ್ ಮಾಡುವ ಕ್ರಮವನ್ನು ತೆಗೆದುಕೊಂಡಿಲ್ಲ. ಸುಮಾರು ೫-೬ ದಿವಸಗಳ ನಂತರವೂ ಯಾವ

ಕ್ರಮವನ್ನೂ ತೆಗೆದುಕೊಂಡಿಲ್ಲ. ಅನಂತರ ಮಾನ್ಯ ಮಂತ್ರಿಯವರು ಆರ್ಡರ್ ಕೊಟ್ಟರೂ ಅದನ್ನು ಕಾರ್ಯಗತ ಮಾಡಲಿಲ್ಲ. ಮಂತ್ರಿಗಳವರು ಸಂಬಂಧಪಟ್ಟವರನ್ನು ಸಸ್ಪೆಂಡ್ ಮಾಡಲಾಗಿದೆ ಎಂದು ಒಂದು ಹೇಳಿಕೆಯಲ್ಲಿ ಕೇಳಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳವರನ್ನು ಭೇಟಿ ಆದನಂತರ, ನನಗಿಂತ ಮುಂಚೆ ಮಾನ್ಯ ಮಂತ್ರಿಯವರು ಅಲ್ಲಿಗೆ ಹೋಗಿ ಈಗಾಗಲೇ ಸಂಬಂಧಪಟ್ಟಂಥ ಸಿ.ಪಿ, ಹಾಗೂ ಗುರುಮಿಟ್ಕಲ್ ಮತ್ತು ಯಾದ್‌ಗೀರ್ ಸಬ್‌ಇನ್ಸ್‌ಪೆಕ್ಟರ್‌ಗಳವರನ್ನು ಸಸ್ಪೆಂಡ್ ಮಾಡಲಾಗಿದೆ ಎಂದು ಹೇಳಿದ್ದಾರೆ.

ಶ್ರೀ ಜಿ. ಬಸವಣ್ಣಪ್ಪ.—ಆವೊತ್ತು ಸಸ್ಪೆಂಡ್ ಮಾಡಲಾಗಿದೆ ಎಂದು ಹೇಳಿಕೆಯಲ್ಲಿ ಹೇಳಿದ್ದೀನೆ. ಆದರೆ ದಿನಾಂಕ ೨೫ ಮತ್ತು ೨೬ ರಂದು ರಜೆ ಬಂತು.....

ಶ್ರೀ ಎಂ. ಮಲ್ಲಿಖಾರ್ಜುನ ಖರ್ಗೆ.—ತಾವುಗಳು ಕೊಟ್ಟಂತಹ ಸ್ಟೇಟ್‌ಮೆಂಟ್, ನನ್ನ ಹತ್ತಿರ ಇದೆ. ಅದು ಡೆಕ್ಕನ್ ಹೆರಾಲ್ಡ್‌ನಲ್ಲಿ ಬಂದಿದೆ. ಅದರ ಕೆಲವು ಸಾಲುಗಳನ್ನು ನಾನು ಈಗ ಓದುತ್ತೇನೆ.

"Three Police Officers have been suspended in connection with the alleged parading of the Gurumitkal Municipal President and nine others half-naked through the streets of the Town on January 15th. Disclosing this to newsmen here today, Social Welfare Minister Sri G. Basavannappa said Yadgir Circle Inspector Hiremath, Sub-Inspector Riyaz and Gurumitkal Sub-Inspector Yellappa had been suspended. Mr. Mumtaz, Deputy Superintendent of Police had been asked to go on leave, he added."

ಅಂದರೆ ತಾವುಗಳು ಈಗಾಗಲೇ ಸಂಬಂಧಪಟ್ಟವರನ್ನು ಸಸ್ಪೆಂಡ್ ಮಾಡಿದ್ದೇವೆ ಎಂದು ಹೇಳಿದ್ದೀರಿ. ಅದು ಪತ್ರಿಕೆಗಳಲ್ಲಿ ಬಂದಿದೆ. ಇಷ್ಟು ಆಗಿ ಸಸ್ಪೆಂಡ್ ಮಾಡಿದ್ದೇವೆ ಎಂದು ಆದೇಶ ಕೊಟ್ಟರೂ ಕೂಡ ಅದು ಜಾರಿಯಲ್ಲಿ ಬರಲಿಲ್ಲ. ಆ ಅಧಿಕಾರಿಗಳು ಅದೇ ರೀತಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರೇ ಆವೊತ್ತೂ ಕೂಡ ಇದ್ದಾರೆ. ಮಾನ್ಯ ಮಂತ್ರಿಗಳು ರಜೆ ಬಂತು ಎಂದು ಹೇಳುತ್ತಾರೆ. ರಜೆ ಕಳೆದರೂ ಕೂಡ ಇಲ್ಲಿಯವರೆಗೆ ಸದರಿ ಆದೇಶವನ್ನು ಜಾರಿಗೆ ತಂದಿಲ್ಲ. ಜನವರಿ ೨೬ನೇ ದಿನಾಂಕದಂದು ಪ್ರಜಾಪ್ರಭುತ್ವ ದಿನಾಚರಣೆಯ ಸಮಾರಂಭದಲ್ಲಿ ಅದೇ ಅಧಿಕಾರಿಗಳು ಧ್ವಜಾರೋಹಣ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಆ ಕುರಿತಾದ ಮಾಹಿತಿಗಳು ನನ್ನಲ್ಲಿ ಇವೆ. ಮಾನ್ಯ ಮಂತ್ರಿಗಳವರು ಖುದ್ದಾಗಿ ಬಂದು ನೋಡಿದರೂ ಕೂಡ ಸಸ್ಪೆಂಡ್‌ನಲ್ಲಿ ಇಡಲಿಕ್ಕೆ ಆಗಲಿಲ್ಲ. ಈ ಕೆಲಸವನ್ನು ಮಾಡುವ ಅಧಿಕಾರಿ ಡಿ.ಐ.ಜಿ.ಯವರಿಗೇ ಇದೆ. ಆದರೆ ಅವರು ಅದನ್ನು ಮಾಡಲಿಲ್ಲ. ತಮ್ಮ ಅಧಿಕಾರವನ್ನು ಅವರು ಚಲಾಯಿಸಬಹುದಾಗಿತ್ತು. ಹಾಗೆ ಚಲಾವಣೆ ಮಾಡಿದ ನಂತರ ಏನು ಎನ್‌ಕ್ವಾಯರಿ ಆಗುತ್ತಿತ್ತೋ ಅದು ಆಗುತ್ತಿತ್ತು. ಇವರು ಹಾಗೆ ಮಾಡದಿರುವುದಕ್ಕೆ ಏನು ಒತ್ತಡ ಇತ್ತು? ಇಲ್ಲಿ ಯಾವ ಪಕ್ಷದ ವಿಚಾರವೂ ಇರಲಿಲ್ಲ. ನಮ್ಮ ಪಕ್ಷದವರು ಮತ್ತು ನಿಮ್ಮ ಪಕ್ಷದವರು ಎಲ್ಲರೂ ಒತ್ತಾಯ ಮಾಡಿದ್ದಾರೆ. ಇಷ್ಟೆಲ್ಲ ಇದ್ದರೂ ಕೂಡ ಯಾವ ಕಾರಣಕ್ಕಾಗಿ ಸಸ್ಪೆಂಡ್ ಆದೇಶವನ್ನು ಜಾರಿಯಲ್ಲಿ ತರಲಿಲ್ಲ? ಯಾವ ಕಾರಣಕ್ಕಾಗಿ ಅವರಿಗೆ ಇದುವರೆಗೆ ರಕ್ಷಣೆ ಕೊಡುತ್ತಾ ಇದ್ದೀರಿ? ಈ ವಿಷಯಗಳನ್ನು ನಾನು ಆವೊತ್ತು ತಮ್ಮ ಮೂಲಕ ಕೇಳಬೇಕಾಗಿದೆ. ಸರಕಾರದವರ ಮಾತುಗಳು ಪೋಲೀಸರು ಮೇಲೆ ನಡೆಯುವುದಿಲ್ಲವೇ? ಅವರಿಗೆ ಬೇರೆ ಡಿಪಾರ್ಟ್‌ಮೆಂಟ್ ಇದೆ, ಅವರು ನಿಮ್ಮ ಹಿಡಿತದಲ್ಲಿ ಇಲ್ಲ ಎಂದು ನಮಗೆ ಇದರಿಂದ ಗೊತ್ತಾಗುತ್ತದೆ. ಅವರಿಗೆ ಏನಾದರೂ ಮಾಡಿದರೆ ನಿಮಗೆ ಭಯ ಇದೆಯೋ ಏಂಬುದು ನನಗೆ ಗೊತ್ತಿಲ್ಲ. ಇದನ್ನೆಲ್ಲಾ ಅವಲೋಕಿಸಿದರೆ ಇದರಲ್ಲಿ ಏನೋ ಒಂದು ಹಿನ್ನಲೆ ಇರಬೇಕು ಎಂದು ಅನ್ನಿಸುತ್ತದೆ. ಇಲ್ಲದಿದ್ದರೆ ಇಷ್ಟು ಜನ ಉನ್ನತ ಅಧಿಕಾರಿಗಳು, ಎಸ್.ಪಿ.ಯವರು, ಡಿ.ಐ.ಜಿ. ಯವರು, ಮಂತ್ರಿಗಳು, ನಾಗರೀಕರು, ಎಲ್ಲರೂ ಖುದ್ದಾಗಿ ವಿಸಿಟ್ ಮಾಡಿ ನೋಡಿದ್ದಾರೆ. ಅವಮಾನಿತರಾದಂತಹ ವ್ಯಕ್ತಿಗಳಿಗೆ ಊರಿಗೆ ಹೋಗುವುದಕ್ಕೆ ಮುಖವಿಲ್ಲದಾಗಿದೆ. ಅಷ್ಟೊಂದು ಅವಮಾನಿತರಾಗಿದ್ದಾರೆ. ಆವೊತ್ತು ಆ ಜನಗಳು ಬೆಂಗಳೂರಿನಲ್ಲಿ, ಗುಲ್ಬರ್ಗದಲ್ಲಿ ನಾಚಿಕೆಗೊಂಡು

ಜೀವನ ಮಾಡುತ್ತಿದ್ದಾರೆ. ನಮಗೂ ಕೂಡ ತಲೆ ಬಗ್ಗಿಸ ಬೇಕಾದಂತಹ ಪರಿಸ್ಥಿತಿ ಬಂದು ಒದಗಿದೆ. ಒಟ್ಟಿನಲ್ಲಿ ಇಂತಹ ಒಂದು ಪರಿಸ್ಥಿತಿಯನ್ನು ಪೋಲೀಸ್ ಅಧಿಕಾರಿಗಳು ಅಲ್ಲಿ ನಿರ್ಮಾಣ ಮಾಡಿದ್ದಾರೆ. ಇನ್ನೊಂದು ವಿಷಯ.

ಈಗ ನಾನು ಕೇಳುವುದು ಇಷ್ಟೆ. ಇದೆಲ್ಲ ಆಗಬೇಕಾದರೆಕಾರಣ ಏನು ? ಅವರನ್ನು ಈ ಪ್ರಮಾಣದಲ್ಲಿ ಅಪಮಾನಿಸುವುದಕ್ಕೆ ಇದ್ದ ಹಿನ್ನೆಲೆ ಏನು ? ಒಂದು ಪಕ್ಷ ನಿಮ್ಮ ದೃಷ್ಟಿಯಲ್ಲಿ ಅವರು ಗೂಂಡಾಗಳಾಗಿದ್ದರೆ ಗೂಂಡಾ ಆಕ್ಟ್ ಇತ್ತಲ್ಲ ಅದರ ಪ್ರಕಾರ ಅವರನ್ನು ಅರೆಸ್ಟ್ ಮಾಡಿ ಒಂದಾರು ತಿಂಗಳು ಕಾಲ ಒಳಕ್ಕೆ ಹಾಕಬಹುದಾಗಿತ್ತಲ್ಲ. ಕೇವಲ ಮುನಿಸಿಪಾಲಿಟಿಯವರು ಪೋಲೀಸ್ ಕ್ವಾರ್ಟರ್ಸ್‌ಗೆ ನೀರು ಕೊಡಲಿಲ್ಲ ಎಂಬ ಕಾರಣಕ್ಕೆ ಅವರನ್ನು ಹಿಡಿದುಕೊಂಡು 'ಮಗನೇ ನಮಗೆ ನೀರು ಡಿಸ್‌ಕನೆಕ್ಟ್ ಮಾಡುಸುತ್ತೀಯಾ' ಎಂದು ಹೊಡೆದರಲ್ಲ ಇದನ್ನು ಯಾವ ಕಾನೂನಿನ ಪ್ರಕಾರ, ಯಾವ ನ್ಯಾಯದ ಪ್ರಕಾರ ಮಾಡಿದರು ಎಂದು ಕೇಳುತ್ತೇನೆ. ಇದಕ್ಕೆ ಸಂಬಂಧಪಟ್ಟ ಹಾಗೇ ಇಲ್ಲೊಂದು ದಾಖಲೆಯನ್ನು ಈ ಸದನದ ಗಮನಕ್ಕೆ ತರುತ್ತೇನೆ. ಈ ಕೆಳಗಿನ ಪತ್ರವನ್ನು ಮುನಿಸಿಪಾಲಿಟಿ ಪ್ರೆಸಿಡೆಂಟರು ಚೀಫ್ ಆಫೀಸರ್‌ಗೆ ಬರೆದಿದ್ದಾರೆ. ಅದೇನೆಂದರೆ :

"Office of the Town Municipal Council, Gurumatkal ; Subject: Dis-connection of Tap at Police quarters of the area, owned by Babulal :

The General body meeting held on 28-12-1985 has raised objection for direct connection given to the Police quarters and New Saw Mill area of Pannalal Babulal of Gurumitkal, It is also clear from your report that a tap connection is given directly to the said Quarters and also to the Saw Mill. Hence you are directed to disconnect the Tap by tomorrow and submit the report immediately."

ಅಂದರೆ ಬೇರೆ ಎಲ್ಲರಿಗೂ ಹೇಗೆ ನೀರು ಸರಬರಾಜು ಕೊಡುತ್ತಿದ್ದೀರೋ ಅದೇ ರೀತಿ ಇವರಿಗೂ ಕೊಡಿ ಎಂದು ಹೇಳಿದ್ದಾರೆ. ಆಮೇಲೆ ಮುನಿಸಿಪಾಲಿಟಿ ಕೌನ್ಸಿಲರ್ಸ್ ಒಂದು ರೆಸಲ್ಯೂಷನ್ ಪಾಸ್ ಮಾಡಿ ಎಲ್ಲ ಕಡೆಯೂ ಎರಡೆರಡು ಗಂಟೆ ನೀರು ಸರಬರಾಜು ಮಾಡಬೇಕೆಂದೂ, ಸ್ಪೆಷಲ್ ಟ್ರೀಟ್‌ಮೆಂಟ್ ಯಾರಿಗೂ ಇರಬಾರದೆಂದೂ, ೧೫ ಸಾವಿರ ಜನ ಇರುವ ಊರಿನಲ್ಲಿ ಎಲ್ಲರಿಗೂ ಸಾಮಾನ್ಯ ಸೌಲಭ್ಯ ಇರಬೇಕೆಂದು ತೀರ್ಮಾನ ಮಾಡಿಕೊಂಡರು. ಆದರೆ ಸಬ್‌ಇನ್ಸ್‌ಪೆಕ್ಟರ್ ಮುನಿಸಿಪಾಲಿಟಿ ಪ್ರೆಸಿಡೆಂಟರನ್ನು ನೀನು ನಮ್ಮ ಕ್ವಾರ್ಟರ್ಸಿಗೆ ಇರುವ ನೀರನ್ನು ಕಟ್ ಮಾಡ್ತೀಯಾ, ಎಷ್ಟು ಧೈರ್ಯ ನಿಂಗೆ ಎಂದು ಕೇಳಿ ಅವರನ್ನು ಹೊಡೆದರು. ಪೋಲೀಸರಿಂದ ಧಾಳಿಗೊಳಗಾದವರು ಎಂದಿನಿಂದಲೂ ಪೋಲೀಸರ ಗೂಂಡಾ ದಾಖಲೆಗಳಲ್ಲಿ ಇರಲಿಲ್ಲ. ೫೦ನೇ ಸಾಲಿನಲ್ಲಿ ಇನ್ಸ್‌ಪೆಕ್ಷನ್ ಬಂಗಲೆಯಲ್ಲಿದ್ದ ಮುನಿಸಿಪಾಲಿಟಿ ಪ್ರೆಸಿಡೆಂಟರನ್ನು ಮಂತ್ರಿತರರನ್ನು ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಬಂದು ಕೈಕೋಳ ಹಾಕಿ ಚಿತ್ರಹಿಂಸೆ ಮಾಡಿರುವುದನ್ನು ನೋಡಿದರೆ ವಿನಾಕಾರಣ ನಾಳೆ ನನ್ನ ಮೇಲೂ ಈ ಸರ್ಕಾರ ದೌರ್ಜನ್ಯ ಮಾಡಿಸಬಹುದೆಂದು ನನಗೆ ಅನ್ನಿಸುತ್ತಿದೆ. ಈ ಥರ ಇದುವರೆಗೂ ನಡೆದಿರಲಿಲ್ಲ. ಈಗ ಈ ರೀತಿಯಾಗಬೇಕಾದರೆ ಇದರ ಹಿಂದೆ ಯಾರ ಕೈವಾಡ ಇದೆ ? ಐಜಿಪಿ ಇದ್ದಾರೋ, ಡಿಐಜಿ ಇದ್ದಾರೊ, ಎಸ್‌ಪಿ ಇದ್ದಾರೋ ಇದರ ಹಿಂದೆ ? ಮುಖ್ಯವಾಗಿ ಈ ಅಂಶದ ಬಗ್ಗೆ ತನಿಖೆಯಾಗಬೇಕು. ಮತ್ತು ತಪ್ಪು ತಸ್ಥರನ್ನು ಇಲ್ಲಿವರೆಗೆ ಸಸ್ಪೆಂಡ್ ಮಾಡಿಲ್ಲ. ತಕ್ಷಣ ಅವರನ್ನು ಸಸ್ಪೆಂಡ್‌ಮಾಡಿ. ಆಮೇಲೆ ನೀವು ಯಾವ ಥರದ ಎನ್‌ಕ್ವಯರಿಯಾದರೂ ಮಾಡಿಸಿ. ಮೊದಲು ಅವರ ಸಸ್ಪೆನ್‌ಷನ್ ಆಗಲಿ ಎನ್‌ಕ್ವಯರಿ ರಿಪೋರ್ಟ್ ಬಂದ ಮೇಲೆ ಬೇಕಾದರೆ ಅವರನ್ನು ಡಿಸ್ಮಿಸ್ ಮಾಡುವಿರಂತೆ ಅದಕ್ಕೆ ನಿಮಗೆ ಅವಕಾಶ ಇದೆ. ಇಷ್ಟು ದೊಡ್ಡ ಘಟನೆ ನಡೆದಿದೆ. ಅದೂ ಕೂಡ ಎಲ್ಲಿ ಆಗಿದೆ ಎಂದರೆ ವೀಕರ್‌ಸೆಕ್ಷನ್ಸ್, ಬ್ಯಾಕ್‌ವರ್ಡ್ ಕ್ಲಾಸ್ ಜನರು ಇರತಕ್ಕಂತಹ ಏರಿಯಾದ ಮೇಲೆ ನಡೆದಿದೆ. ಅಲ್ಲಿಯ ಅಧಿಕಾರಿಗಳು ವೆಸ್ಟೆಡ್ ಇಂಟರೆಸ್ಟ್, ಕ್ಲಾಸ್ ಎಕ್ಸ್‌ಪ್ಲಾಯಿಟ್ ಮಾಡುತ್ತಾರೆ. ಅಲ್ಲಿಗೆ ಒಳ್ಳೆಯ ಅಧಿಕಾರಿಗಳನ್ನು

ಹಾಕಿ ಎಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ಹಾಗೂ ಸಂಬಂಧಪಟ್ಟ ಮಂತ್ರಿಗಳಿಗೆ ಪದೇ ಪದೇ ಹೇಳುತ್ತಿದ್ದೇನೆ. ಆ ಭಾಗದಲ್ಲಿ ಶೋಷಣೆ, ದಬ್ಬಾಳಿಕೆ ಯಾವಾಗಲೂ ಜಾಸ್ತಿ, ಅದನ್ನು ತಡೆಹಿಡಿಯು

ಬೇಕಾದರೆ ಬ್ಯಾಲೆನ್ಸ್ಡ್ ಮೈಂಡ್ ಇರತಕ್ಕಂತಹ ಅಧಿಕಾರಿಗಳು ಬೇಕು. ಅಲ್ಲಿಗೆ ಅಧಿಕಾರಿಗಳನ್ನು ಹೇಗೆ ಕೊಡುತ್ತಾರೆಂದರೆ ಸಬ್‌ಇನ್ಸ್‌ಪೆಕ್ಟರ್ ಹೊಡೆಸಿಕೊಂಡು ಮನೆಗೆ ಬರಬೇಕು, ಇಲ್ಲದಿದ್ದರೆ ಕಟ್ಟಿಗೆ ಎತ್ತುವ ಏನೂ ಉಪಯೋಗವಿಲ್ಲದ ಒಳ್ಳೆಯ ಅಧ್ಯಕ್ಷರ, ಉಪಾಧ್ಯಕ್ಷರ ಮಾನ ಮರ್ಯಾದೆ ತೆಗೆಯುವ ತಕ್ಕಂತಹ ಅಧಿಕಾರಿಗಳನ್ನು ಪೋಸ್ಟ್ ಮಾಡುತ್ತಾರೆ. ಇಪರದು ಈ ರೀತಿಯಾದ ಆಡಳಿತ ನಡೆದಿದೆ. ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಇದರ ಬಗ್ಗೆ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕು, ಏಕೆಂದರೆ ಇನ್ನೂ ಅನೇಕ ಫ್ಯಾಕ್ಟ್ಸ್ ಇದೆ ನಾನು ಅದನ್ನು ಹೇಳಲಿಲ್ಲ. ತಾವು ಇದನ್ನು ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟರೆ ಎಫ್.ಐ.ಆರ್. ಯಾವಾಗ ಬಂತು, ಯಾವಾಗ ಅರೆಸ್ಟ್ ಮಾಡಿದರು, ಯಾವರೀತಿಯಾಗಿ ತೊಂದರೆ ಕೊಟ್ಟರು ಎಂಬ ಬಗ್ಗೆ ಹೇಳಬಹುದು, ಕೆಲವು ಜನರ ಹೆಸರೇ ಇಲ್ಲ, ಅವರನ್ನು ಅರೆಸ್ಟ್ ಮಾಡಿ, ಬಿಡುಗಡೆಯನ್ನು ಅದೇ ರೀತಿ ಮಾಡಿದ್ದಾರೆ. ಹೆಸರು ಒಬ್ಬರದು ಅರೆಸ್ಟ್ ಮಾಡಿದ್ದು ಇನ್ನೊಬ್ಬರನ್ನು, ಈ ಬಗ್ಗೆ ಎಲ್ಲಾ ವಿವರಗಳನ್ನು ತಮ್ಮ ಮುಂದಿಡಲು ಅವಕಾಶ ಮಾಡಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ. ತಾವು ಅವಕಾಶ ಮಾಡಿಕೊಡುತ್ತೀರೆಂದು ನನ್ನ ನಂಬಿಕೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ,

ಶ್ರೀ ರಾಮಕೃಷ್ಣ ಹೆಗಡೆ.—ಒಂದು ವಿಚಾರವನ್ನು ಅರಿಕೆ ಮಾಡಿಕೊಳ್ಳುತ್ತೇನೆ. ತಮಗೆ ಆತಂಕ ಮಾಡುವುದಿಲ್ಲ. ಗುರುಮಿಠಕಲ್‌ನಲ್ಲಿ ಅದಂತಹ ಘಟನೆ ಮತ್ತು ಅದರಲ್ಲಿ ಪೋಲೀಸ್...

ಶ್ರೀ ಎಂ. ಎಸ್. ಕೃಷ್ಣನ್.—ತಾವು ಉತ್ತರ ಕೊಡುವುದಕ್ಕೆ ಮುಂಚೆ.....

ಶ್ರೀ ರಾಮಕೃಷ್ಣ ಹೆಗಡೆ.—ತಾವು ದಯವಿಟ್ಟು ಒಂದು ನಿಮಿಷ ಕುಳಿತುಕೊಳ್ಳಿ. ಇದರಲ್ಲಿ ಪೋಲೀಸರ ಪಾತ್ರ ಏನಿದೆ, ಇದು ಸಮರ್ಥನೀಯ ಅಲ್ಲ. ಈ ಕಡೆ ಕೂತವರು ಯಾರೂ ಅದನ್ನು ಸಮರ್ಥನೆ ಮಾಡುವುದಿಲ್ಲ. ಈಗ ಉಪನಾಯಕರಾದಂತಹ ಶ್ರೀಪಾನ್ ಮಲ್ಲಿಕಾರ್ಜುನ ಖರ್ಗೆಯವರು.....

ಶ್ರೀ ಎಂ.ಎಸ್. ಕೃಷ್ಣನ್.—ನಾನು ವಿವರಗಳಿಗೆ ಹೋಗುವುದಿಲ್ಲ. ಎಲ್ಲ ವಿವರಗಳನ್ನು ಮಾನ್ಯ ಖರ್ಗೆಯವರು ಹೇಳಿದ್ದಾರೆ. ಆ ವಿವರಗಳನ್ನೇ ನಾನು ಮತ್ತೆ ಪುನರುಚ್ಚಾರಣೆ ಮಾಡಿದರೆ ಖಂಡಿತ ತಡೆಯಿರಿ. ನಾನು ಬೇಡ ಎಂದು ಹೇಳುವುದಿಲ್ಲ. ಈ ವಿಷಯದ ಬಗ್ಗೆ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಈ ವಿಷಯದಲ್ಲಿ ಅಡ್ಜರ್ನ್‌ಮೆಂಟ್ ಮೋಷನ್ ಏತಕ್ಕೆ ಬೇಕು. ಇವತ್ತು ಸಂವಿಧಾನತ್ಮಾಕವಾಗಿ ಒಂದು difiance of authority of the Government. ಸಂವಿಧಾನಾತ್ಮಕವಾಗಿ ಇವತ್ತು ಮುಖ್ಯಮಂತ್ರಿಗಳು ಇದ್ದಾರೆ. ಕೌನ್ಸಿಲ್ ಆಫ್ ಮಿನಿಸ್ಟರ್ ಇದ್ದಾರೆ. ಅದರ ಹಕ್ಕುಗಳನ್ನು ಇವತ್ತು ಪೊಟಕು ಮಾಡುವ ರೀತಿಯಲ್ಲಿ ಈ ಪೋಲೀಸ್ ಅಧಿಕಾರಿಗಳು ವರ್ತಿಸಿದ್ದಾರೆ. ಇದರ ಬಗ್ಗೆ.....

ಅಧ್ಯಕ್ಷರು —ಕೃಷ್ಣನ್‌ರವರೇ ಕೇಳಿ. ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಮುಖ್ಯಮಂತ್ರಿಗಳು ಬಹಳ ಸೂಚ್ಯವಾಗಿ ಇದರ ಬಗ್ಗೆ ಹೇಳಿದ್ದಾರೆ.....

(ಗೊಂದಲ)

ಶ್ರೀ ಎಂ.ಎಸ್. ಕೃಷ್ಣನ್.—ಅಧ್ಯಕ್ಷರೇ, ನಾವು ಹೇಳುವುದು ಸ್ವಲ್ಪ ಕೇಳಿ. ಇದು ಬಹಳ ಗಂಭೀರವಾದ ವಿಷಯ ಎಂದು ಅವರೇ ಒಪ್ಪಿಕೊಂಡಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಗಳು).—ಅಧ್ಯಕ್ಷರೇ, ಇದರ ಬಗ್ಗೆ ಉತ್ತರ ಕೊಡಬಾರದು ಎಂದು ಈ ವಿಚಾರವನ್ನು ಪ್ರಸ್ತಾಪ ಮಾಡಲಿಲ್ಲ ಉತ್ತರ ಕೊಡುತ್ತೇವೆ. ಇನ್ನೂ ಉತ್ತರ ಕೊಟ್ಟಿಲ್ಲ. ನೀವು ತಿಳಿದುಕೊಳ್ಳಬೇಕು ನೀವು ಮಾತನಾಡಿದರೆ ನೀವು ಮಾತನಾಡಿದ್ದು ವ್ಯರ್ಥವಾಗುತ್ತದೆ. ಸಸ್ಪೆನ್ಸಿನ್ ಆರ್ಡರ್ ಇವತ್ತು ನಾವು ಮಾಡಿದ್ದೇವೆ. ಅಲ್ಲಿ ಏನಾಯಿತು ಎಂದರೆ ಸಸ್ಪೆನ್ಸನ್ ಆರ್ಡರ್ ಇಸ್ಯೂ ಮಾಡಿದಾಗ ಅಲ್ಲಿ ಮೂರು ಜನ ಅಧಿಕಾರಿಗಳು ಆ ಸ್ಥಾನದಲ್ಲಿರಲಿಲ್ಲ, ಆವರು ಬೆಂಗಳೂರಿಗೆ ಬಂದಿದ್ದರು. ಅಡ್ಮಿನಿಸ್ಟ್ರೇಷನ್ ಟ್ರಿಬ್ಯೂನಲ್‌ನಲ್ಲಿ ಅವರ ವಿರುದ್ಧ ಅರ್ಜಿ ಹೋಗಿದೆ ಎಂದು ಬಂದಿದ್ದರು ಸಸ್ಪೆನ್ಸನ್ ಆರ್ಡರ್ ಜಾರಿಯಾಗಿತ್ತು ಆದರೂ ನೋಟೀಸ್ ಬೋರ್ಡ್‌ನಲ್ಲಿ ಜಾರಿ ಮಾಡಲಿಕ್ಕೆ ಬರುತ್ತದೆ. It is deemed to have been Serviced. They have been suspended today.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಸಸ್ಪೆಂಡ್ ಮಾಡಿದ್ದೀರಿ. ಆದರ ಬಗ್ಗೆ ಶ್ರೀಮಾನ್ ಜಿ. ಬಸವಣ್ಣಪ್ಪನವರು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ.

SRI. RAMAKRISHNA HEGDE.—All these officers are suspended

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.—ಸಸ್ಪೆಂಡ್ ಮಾಡಿದ್ದೇವೆ ಎಂದು ಹೇಳಿ ಸರ್ವೆ ಮಾಡಿದ್ದೀರಿ. "deemed to be" It means that it has not reached in their hands but according to law it is there. ೨೬-೨೭ನೇ ತಾರೀಖಿನಿಂದ ಅವರು ಡ್ಯೂಟಿಯ ಮೇಲೆ ಇದ್ದು ಕೆಲಸ ಮಾಡುತ್ತಿದ್ದರು. ಇದನ್ನೇ ಸಂಬಂಧಪಟ್ಟ ಮಂತ್ರಿಗಳು ಕೂಡಾ ಹೇಳಿದ್ದಾರೆ.

ಅಧ್ಯಕ್ಷರು.—As on today ಆಗಿದ್ದು ಎಂದು ಹೇಳಿದ್ದಾರೆ. ನೀವು ಎಲ್ಲಾ ಮಾಹಿತಿ ತೆಗೆದುಕೊಳ್ಳಿ. ಓರ ಪ್ರಕಾರ ಮಾಹಿತಿಯನ್ನು ತೆಗೆದುಕೊಳ್ಳಿ. ಏಕೆಂದರೆ ಇದು ಬಹಳ ಮುಖ್ಯ ವಾದ ವಿಚಾರ.

ಶ್ರೀ ಎಂ.ಎಸ್. ಕೃಷ್ಣನ್.—ಅವರು ಸಸ್ಪೆಂಡ್ ಮಾಡಲಿಲ್ಲ ಎಂದು ಹೇಳಲಿಲ್ಲ. ಸಸ್ಪೆಂಡ್ ಮಾಡಿದ್ದನ್ನು ಕೂಡ ಕ್ವಶ್ಚನ್ ಮಾಡಿ ಸಸ್ಪೆನ್ಸನ್ ಇಂಪ್ಲಿಮೆಂಟ್ ಮಾಡಿಲ್ಲ. ಪೋಲೀಸರು ಸ್ಟೈಕ್ ಮಾಡಿದ್ದಾರೆ. challenging the executive authority of the Government that too the law and order wing of the Govenment is challenging the executive authority of the Government, That is the most important constitutional point here. ಬೇರೆ ಎಲ್ಲಾ ವಿವರಗಳನ್ನು ಮಾನ್ಯ ಖರ್ಗೆಯವರು ಕೊಟ್ಟಿದ್ದಾರೆ ನಿಜ. ನಾನು ಹೆಚ್ಚಿಗೆ ಹೇಳುವುದಕ್ಕಾಗುವುದಿಲ್ಲ. ನನಗೂ ಸಹಾ ಶರ್ಟ್ ಬಿಚ್ಚಿದ್ದಾರೆ. ನಾನು ಸಹಾ ಪೋಲೀಸರಿಂದ ಆ ಕಷ್ಟವನ್ನು ಅನುಭವಿಸಿದ್ದೇನೆ. ಈ ಪೌರನಿಗೆ, ಮುನಿಸಿಪಲ್ ಪ್ರೆಸಿಡೆಂಟ್‌ಗೆ ಹೊಡೆದಿದ್ದಾರೆ. ಇದರಲ್ಲಿ ಜನತಾ ಪಕ್ಷದವರು, ಕಾಂಗ್ರೆಸ್ ಪಕ್ಷದವರೂ ಇದ್ದಾರೆ. ಈ ರಾಜಕೀಯದಲ್ಲಿ ನಿಮ್ಮ ಜನತಾ ಪಕ್ಷದವರು ಸಹ ಪಟು ತಿಂದಿದ್ದಾರೆ.

(ಗೊಂದಲ)

ಆದ್ದರಿಂದ ನಾನು ಹೇಳುವುದು ಏನೆಂದರೆ ಇದರ ಬಗ್ಗೆ ಇವತ್ತೇ ಚರ್ಚೆಯಾಗಬೇಕು.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಶ್ರೀ ಎಂ.ಎಸ್. ಕೃಷ್ಣನ್‌ರವರಿಗೆ ಪೋಲೀಸಿನವರ ಬೆಂಬಲ ಏನಾದರೂ ಇದೆಯೇ ? ಅವರ ಬಗ್ಗೆ ಎಷ್ಟರಮಟ್ಟಿಗೆ ಮಾನ್ಯ ಸದಸ್ಯರಿಗೆ ಕಳಕಳಿ ಇದೆಯೊ ಅಷ್ಟರಮಟ್ಟಿಗೆ ನಮಗೂ ಕೂಡ ಕಳಕಳಿ ಇದೆ. ನಾವು ಸಹ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು.—ಇದರ ಬಗ್ಗೆ ನೋಟೀಸ್ ಕೊಟ್ಟಿರುವುದನ್ನು ರೂಲ್‌ಓರ ಪ್ರಕಾರ ಕನ್‌ವರ್ಟ್ ಮಾಡಿದ್ದೇನೆ. ಈವೊತ್ತೇ ಇದನ್ನು ಚರ್ಚೆ ಮಾಡುವುದಕ್ಕೆ ಮುಧ್ಯಾಹ್ನ ೩ ಗಂಟೆಗೆ ತೆಗೆದುಕೊಳ್ಳೋಣ

ಶ್ರೀ ಎಂ. ವೀರಪ್ಪಮೊಯ್ಲಿ.—ಇದರ ಬಗ್ಗೆ ಈಗ ಇರತಕ್ಕ ಕಾಲಿಂಗ್ ಅಟೆನ್‌ಕ್ಷನ್ ನೋಟೀಸ್ ತೆಗೆದುಕೊಂಡರೆ ತೊಂದರೆಯಾಗುತ್ತದೆ.

ಅಧ್ಯಕ್ಷರು.—ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ೩ ಗಂಟೆಗೆ ಇಟ್ಟಿದ್ದೇವೆಲ್ಲ, ಆದುದರಿಂದ ಕಾಲಿಂಗ್ ಅಟೆನ್‌ಕ್ಷನ್ ತೆಗೆದುಕೊಳ್ಳುವುದಿಲ್ಲ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಈ ಘಟನೆ ಬಗ್ಗೆ ಎಲ್ಲ ಪಕ್ಷದ ಸದಸ್ಯರೂ ತಮ್ಮ ಕಳಕಳಿಯನ್ನು ವ್ಯಕ್ತ ಪಡಿಸಿದ್ದಾರೆ. ಪೋಲೀಸಿನವರು ಯಾವ ರೀತಿಯಾಗಿ ಆ ಜನರ ಮೇಲೆ ವರ್ತನೆ ಮಾಡಿದ್ದಾರೆ ಎನ್ನುವುದರ ಬಗ್ಗೆ ವಿಚಾರ ಮಾಡಬೇಕಾಗಿದೆ. ನಮ್ಮ ಜಿಲ್ಲೆಗೆ ಮಾನ್ಯ ಗೃಹಮಂತ್ರಿಗಳು ಬಂದು ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಈ ಬಗ್ಗೆ ನಾವು ಇನ್ನೂ ಚರ್ಚೆ ಮಾಡಬೇಕಾಗಿದೆ. ಪೋಲೀಸಿನವರು ಮಾಡತಕ್ಕಂಥ ಈ ರಾಕ್ಷಸೀ ಕ್ರಮವನ್ನು ನೋಡಿಕೊಂಡು ನಾವು ಸಹಿಸಿಕೊಳ್ಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಈ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ೩ ಗಂಟೆಗೆ ತೆಗೆದುಕೊಳ್ಳುತ್ತೇವೆ. ಆವಾಗ ತಾವು ಮಾತನಾಡಿ.

ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್.—ತಾವು ನನಗೆ ಮಾತನಾಡುವುದಕ್ಕೆ ಸಂಪೂರ್ಣ ಅವಕಾಶ ಕೊಡಬೇಕು.

ಅಧ್ಯಕ್ಷರು.—ಅವಕಾಶ ಕೊಡುತ್ತೇನೆ.

ಗಮನ ಸೆಳೆಯುವ ಸೂಚನೆಗಳು

ಶಾಸಕರ ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯರಿಗೆ ನಿವೇಶನ ಒದಗಿಸುವಲ್ಲಿ ವಿಳಂಬ

ಶ್ರೀ ಕೆ.ಹೆಚ್. ಪಾಟೀಲ್.—ಶಾಸಕರ ಗೃಹ ನಿರ್ಮಾಣದ ಸಹಕಾರ ಸಂಘದ ಸದಸ್ಯರಿಗೆ ನಿವೇಶನಗಳನ್ನು ಒದಗಿಸುವಲ್ಲಿ ಆಗಿರುವ ಅತಿಯಾದ ವಿಳಂಬದ ಬಗ್ಗೆ ನಗರಾಭಿವೃದ್ಧಿ ಕಾನೂನು ಸಂಸದೀಯ ವ್ಯವಹಾರಗಳ, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಮಂತ್ರಿಗಳು).—

There is no delay on the part of the Bangalore Development Authority in allotment of sites to the Members of the Legislator House BuildingCo-operative Society. The details of sites allotted and proposed to be allotted are as fallows:—

1. The proposal for release of 56 sites in Koramangala 4th 'B' Block in favour of the society was approved by the Bangalore Development Authority *vide* resolution No. 139dated 17.7.1986 and was sent to Government for approval since Government approval was required for relaxing the ban on bulk allotment of sites. On the assurance made during the last Session in the Legislative Council, Government considered the request and approved bulk allotment of sites, be given to the Legislator House Building Co-operative Society Ltd., in one place for distribution to eligible Members who do not own sites or houses either allotted by erstwhile City Improvement Trust Board or Bangalore Development Authority. The approval was also subject to the condition prescribed in the Bangalore Development Authority(Allotment of sites Rules. Accordingly, the approval of Government for release of sites to the Legislators House Building Co-operative Society Ltd., was intimated to Bangalore Development Authority *vide* Government Letter No. HUD 339 MNX 86, dated 24.10.1986.

2. Subsequently on the representation of Shri M.S.Narayan Rao, MLA., for allotment of sites to Legislators who are members of Survodaya Welfare Association (Regd.,) Government considered the request and approved that the sites be distributed equally among both the Associations of the Legislatores. Accordingly Bangalore Development Authority was directed to take action *vide* Government letter No. HUD 339 MNX 86, dated 15.12.1986.